# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| ಸಂಖ್ಯೆ: ಉ.ಆ(ಮಾ)/ಪಿ.ಆರ್/833/2012-13 | ದಿನಾಂಕ:06-09-2012 |
|---|---|
| ಇಂದ,<br>ಉಪ ಆಯುಕ್ತರು (ಮಾರುಕಟ್ಟೆ)<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ರವರಿಗೆ,<br>ಜಂಟಿ ಆಯುಕ್ತರು (ಆಡಳಿತ)<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

## ಅಂತರಿಕ ಕಛೇರಿ ಟಿಪ್ಪಣಿ

ವಿಷಯ: ಮಾಹಿತಿ ಹಕ್ಕು ಕಾಯ್ದೆ 2005ರ ಅಡಿಯಲ್ಲಿ ಪಾಲಿಕೆಯ ಇಲಾಖೆಗಳಿಗೆ ಸಂಬಂಧಿಸಿದಂತೆ, Standard Procedure ರೂಪಿಸುವ ಬಗ್ಗೆ.

ಉಲ್ಲೇಖ: 1) ಮಾಹಿತಿ ಆಯೋಗದ ಪ್ರಕರಣ ಸಂಖ್ಯೆ:ಕೆ.ಐ.ಸಿ/1204/ಸಿ.ಓ.ಎಂ./2007, ಕೆ.ಐ.ಸಿ/1412/ಪಿಟಿಎನ್ 2010, ಸಿ/ಡಬ್ಲ್ಯೂ/ಕೆ.ಐ.ಸಿ/1176/ಪಿ.ಟಿ.ಎನ್/2010 ಮತ್ತು ಕೆ.ಐ.ಸಿ/1177/ಪಿಟಿಎನ್/2010 ದಿನಾಂಕ: 31-07-2012.
2) ಜಂಟಿ ಆಯುಕ್ತರು (ಆಡಳಿತ) ರವರ ಆಂತರಿಕ ಕಛೇರಿ ಟಿಪ್ಪಣಿ ಪತ್ರದ ಸಂಖ್ಯೆ: ಬಿ12(5ಜಿ)ಪಿಆರ್/43/09-10 ದಿನಾಂಕ: 31-08-2012

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರದ ಅನ್ವಯ ಉಪ ಆಯುಕ್ತರು (ಮಾರುಕಟ್ಟೆ) ವಿಭಾಗಕ್ಕೆ ಒಳಪಡುವ ಕಾರ್ಯನಿರ್ವಹಣೆಯ ಮಾನದಂಡಗಳು ಈ ಕೆಳಕಂಡಂತಿವೆ.

### ಕಾರ್ಯಗಳು ಮತ್ತು ಕರ್ತವ್ಯಗಳು 1976 ಅಡಿಯಲ್ಲಿ:

ಕರ್ನಾಟಕ ಮುನಿಸಿಪಲ್ ಕಾಯ್ದೆ ಅಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಾರುಕಟ್ಟೆಗಳ ನಿರ್ವಹಣೆ, ಮಾರುಕಟ್ಟೆಗಳಲ್ಲಿರುವ ಮಳಿಗೆಗಳ ಪರವಾನಗಿದಾರರಿಗೆ ನೀಡುವ ಅಧಿಕಾರವನ್ನು ಹೊಂದಿರುತ್ತದೆ. ಹಾಗೂ ಸದರಿ ನಿಯಮದಡಿ ಪಾಲಿಕೆಯ ಮಾನ್ಯ ಆಯುಕ್ತರು ಸಂಪೂರ್ಣ ಅಧಿಕಾರವನ್ನು ಹೊಂದಿದ್ದು, ಕಾಲಕಾಲಕ್ಕೆ ಯಾವುದೇ ಪರವಾನಗಿದಾರರ ನ್ಯಾಯಬದ್ಧವಾದ ಬೇಡಿಕೆ, ಪರವಾನಗಿ ನವೀಕರಣ ಹಾಗೂ ಸುಸ್ತಿದಾರರಿಗೆ ಕೆ.ಎಂ.ಸಿ,ಕಾಯ್ದೆ 1976ರ ಅಡಿಯಲ್ಲಿ ಕ್ರಮ ಕೈಗೊಳ್ಳಬಹುದಾಗಿದ್ದು, ಇದಲ್ಲದೇ ಮಾರುಕಟ್ಟೆಗಳ ಶುಚಿತ್ವ ಕಾಪಾಡುವ ಕುರಿತು ಕ್ರಮ ಕೈಗೊಳ್ಳುವುದು. ಮಾರುಕಟ್ಟೆಗಳನ್ನು ಪುನರ್ ಅಭಿವೃದ್ಧಿಪಡಿಸಿ, ನಾಗರಿಕರಿಗೆ ಸಂಪೂರ್ಣ ಸೌಲಭ್ಯಗಳನ್ನು ಕಲ್ಪಿಸುವುದು. ಇದಲ್ಲದೇ ಕೆಲವು ಮುಖ್ಯ ಮಾರುಕಟ್ಟೆಗಳಲ್ಲಿ ವ್ಯವಸ್ಥಿತವಾಗಿ ವಾಹನ ನಿಲುಗಡೆ ಮಾಡಲು ಪ್ರತಿ ವರ್ಷ ಟೆಂಡರ್ ಆಹ್ವಾನಿಸಿ, ವಾಹನ ನಿಲುಗಡೆಯ ಕೆಲಸವನ್ನು ನಿರ್ವಹಿಸಲಾಗುತ್ತಿದೆ. ವಾಹನ ನಿಲುಗಡೆಯಿಂದ ಬರುವ ಶುಲ್ಕದ ವರಮಾನವನ್ನು ನಗರಪಾಲಿಕೆಯ ಬೊಕ್ಕಸಕ್ಕೆ ಪಾವತಿಸಲಾಗುತ್ತಿದೆ.

----2

**ಮೇಲ್ವಿಚಾರಣೆ ಮತ್ತು ಜವಾಬ್ದಾರಿಗಳನ್ನು ಒಳಗೊಂಡಂತೆ ತೀರ್ಮಾನ ಕೈಗೊಳ್ಳುವಲ್ಲಿ ಅನುಸರಿಸುವ ಕ್ರಮಗಳು:-**

ಕಛೇರಿಯ ಸಿಬ್ಬಂದಿಯವರು ಸಾರ್ವಜನಿಕರಿಂದ ಬಂದಂತಹ ಅರ್ಜಿಗಳನ್ನು ಸ್ವೀಕರಿಸಿ 1976 ಕೆ.ಎಂ.ಸಿ ಕಾಯ್ದೆ ಅಡಿಯಲ್ಲಿ ಹಾಗೂ 2006ರ ಬೈಲಾಗಳ ಅಡಿಯಲ್ಲಿ ಪರಿಶೀಲಿಸಿ ನಿಗಧಿತ ಸಮಯದೊಳಗೆ ಉಪ ಆಯುಕ್ತರು (ಮಾರುಕಟ್ಟೆ) ರವರ ಸಲಹೆ, ಸೂಚನೆ ಹಾಗೂ ಆದೇಶದೊಂದಿಗೆ ಪತ್ರ ಹಾಗೂ ಕಡತಗಳನ್ನು ಕಂದಾಯ ಅಧಿಕಾರಿ (ಮಾರುಕಟ್ಟೆ) ಹಾಗೂ ಸಹಾಯಕ ಕಂದಾಯ ಅಧಿಕಾರಿ (ಮಾರುಕಟ್ಟೆ-ಪೂರ್ವ/ಪಶ್ಚಿಮ/ದಕ್ಷಿಣ) ರವರ ಕಛೇರಿಗೆ ರವಾನಿಸುವುದು ಹಾಗೂ ಕಂದಾಯ ಅಧಿಕಾರಿ (ಮಾರುಕಟ್ಟೆ) ಹಾಗೂ ಸಹಾಯಕ ಕಂದಾಯ ಅಧಿಕಾರಿ (ಮಾರುಕಟ್ಟೆ-ಪೂರ್ವ/ಪಶ್ಚಿಮ/ದಕ್ಷಿಣ) ಗಳಿಂದ ಹಾಗೂ ಇತರೆ ಮೇಲಾಧಿಕಾರಿಗಳಿಂದ ಬರುವ ಪತ್ರ ಹಾಗೂ ಕಡತಗಳನ್ನು ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಸಲ್ಲಿಸಿ ಅವರ ಆದೇಶದಂತೆ ಕಾರ್ಯ ನಿರ್ವಹಿಸುವುದು.

**ಕಾರ್ಯ ನಿರ್ವಹಿಸುವಲ್ಲಿ ಅನುಸರಿಸುವ ಮಾನದಂಡಗಳು :-**

1976ರ ಕೆ.ಎಂ.ಸಿ. ಕಾಯ್ದೆ ಪರಿಚ್ಛೇದಗಳಲ್ಲಿ ನಿಗಧಿಪಡಿಸಿರುವ ಮಾನದಂಡಗಳು, ಕೌನ್ಸಿಲ್ ಸಭೆ, ಮಾರುಕಟ್ಟೆ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಮಾನ್ಯ ಆಯುಕ್ತರವರು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸಿ ಕ್ರಮ ವಹಿಸಲಾಗುತ್ತಿದೆ. ಹಾಗೂ ಅಂತಿಮ ಹಂತದಲ್ಲಿ ಅನುಮೋದನೆಯನ್ನು ಮಾನ್ಯ ಆಯುಕ್ತರವರು ತೀರ್ಮಾನ ತೆಗೆದುಕೊಳ್ಳುತ್ತಾರೆ.

6/9/12

ಉಪ ಆಯುಕ್ತರು (ಮಾರುಕಟ್ಟೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

6/9/12